# ಏಕತೆಗೆ ದೇಶದಾದ್ಯಂತ ‘ಭರವಸೆ ನಡಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಏಕತಾ ಮಿಷನ್ನಿನ ಸಂಸ್ಥಾಪಕ ‘ಎಂ’ ಅವರ ನೇತೃತ್ವದಲ್ಲಿ ಶಾಂತಿ ಹಾಗೂ ಸೌಹಾರ್ದತೆ ಆಶಯದೊಂದಿಗೆ 2015ರ ಜನವರಿ 12ರಂದು ಕನ್ಯಾಕುಮಾರಿಯಿಂದ ‘ಭರವಸೆಯ ನಡಿಗೆ’ (ವಾಕ್ ಆಫ್ ಹೋಪ್) ಆರಂಭಿಸಲಾಗುತ್ತಿದೆ.

ಕನ್ಯಾಕುಮಾರಿಯಿಂದ ಕಾಶ್ಮೀರದ ವರೆಗಿನ ಸುಮಾರು 15 ತಿಂಗಳ ಈ ಪಾದಯಾತ್ರೆಯಲ್ಲಿ ‘ಎಂ’ ಅವರು 6,500 ಕಿ.ಮೀ ದೂರ ಕ್ರಮಿಸಲಿದ್ದು, ಏಕತೆಯ ಸಂದೇಶ ಸಾರಲಿದ್ದಾರೆ.

ದೇಶದ ದೂಳು–ಧಗೆಗೆ ಮೈಯೊಡ್ಡಿ ಪ್ರತಿದಿನ ಸುಮಾರು 20 ಕಿ.ಮೀ. ದೂರ ಕ್ರಮಿಸಿ, ಹಾದಿಯಲ್ಲಿ ಸಿಗುವ ಹಳ್ಳಿ–ಪಟ್ಟಣಗಳಲ್ಲಿ ತಂಗಲಿದ್ದಾರೆ. ಅಲ್ಲಿನ ಜನ ಸಮುದಾಯವನ್ನು ಭೇಟಿ ಮಾಡಿ, ಸಂವಾದ ನಡೆಸುವ ಜತೆಗೆ ಏಕತಾ ಪ್ರಾರ್ಥನೆಯನ್ನೂ ಮಾಡಲಿದ್ದಾರೆ.

‘ವೈರುಧ್ಯ, ಅಸಮಾನತೆಗಳೇ ತುಂಬಿದ ನಮ್ಮ ದೇಶ ಗೊಂದಲದ ಗೂಡು. ಇಲ್ಲಿನ ವಿದ್ಯಮಾನಗಳಲ್ಲಿ ಸದಾ ತಲ್ಲಣಗೊಳಿಸುವ ಸಂಗತಿಯೆಂದರೆ ಆಗಾಗ ಭುಗಿಲೇಳುವ ಕೋಮು ವೈಷಮ್ಯ. ಇಂತಹ ವಿಷಮ ಸನ್ನಿವೇಶ ಸೃಷ್ಟಿ ಆದಾಗಲೆಲ್ಲ ದೀರ್ಘಾವಧಿಯ ಶಾಂತಿ, ಸಮೃದ್ಧ ಬದುಕಿಗೆ ಭಂಗ ಉಂಟಾಗುತ್ತದೆ’ ಎನ್ನುತ್ತಾರೆ ‘ಎಂ’.

‘ವೈಷಮ್ಯದ ಉರಿಗೆ ಅಸಂಖ್ಯ ಜೀವಗಳು ಬಲಿಯಾಗುತ್ತ ಸಾಮಾಜಿಕ ನೆಮ್ಮದಿ ಛಿದ್ರವಾಗುತ್ತದೆ. ದೇಶದ ಪ್ರಗತಿ ಸ್ಥಗಿತಗೊಳ್ಳುತ್ತದೆ. ಮತ್ತೆ ಎಲ್ಲವೂ ಸಾಮಾನ್ಯ ಸ್ಥಿತಿಗೆ ಮರಳುವಷ್ಟರಲ್ಲಿ ನಮ್ಮ ದೇಶ ಹಲವು ಅವಕಾಶಗಳನ್ನು ಕಳೆದುಕೊಂಡಿರುತ್ತದೆ’ ಎಂದು ಅವರು ವಿವರಿಸುತ್ತಾರೆ.

‘ನಮ್ಮ ರಾಷ್ಟ್ರಪಿತ ಗಾಂಧೀಜಿ ಕೋಮು ಕಲಹಗಳನ್ನು ಬಗೆಹರಿಸುವ ಸಲುವಾಗಿ ಭಾರತದ ಉದ್ದಗಲ ನಡೆದಿದ್ದರು. ಅಂತಹ ಅನೇಕ ಪ್ರಯತ್ನಗಳ ಹೊರತಾಗಿಯೂ ವಸ್ತುಸ್ಥಿತಿ ಬದಲಾಗಿಲ್ಲ. ಸಮಸ್ಯೆಗಳು ಹಾಗೇ ಉಳಿದಿವೆ. ಹಾಗಂತ ನಾವು ಕೈಕಟ್ಟಿ ಕೂರಬೇಕಿಲ್ಲ. ನಮ್ಮ ನಡುವೆ ಭರವಸೆ, ಪ್ರೇಮ, ಶಾಂತಿ, ಸಾಮರಸ್ಯ ಮತ್ತು ಏಕತೆಗಳ ಪುನರುತ್ಥಾನಕ್ಕಾಗಿ ನಾವೆಲ್ಲ ಒಂದಾಗಿ ನಡೆಯೋಣ’ ಎಂದು ಆಹ್ವಾನ ನೀಡುತ್ತಾರೆ.

‘ರಾಜಕೀಯೇತರ ಮಂದಿ ಇಂತಹ ಆಂದೋಲನಗಳಲ್ಲಿ ಭಾಗಿಯಾಗಬೇಕಿದೆ. ಜಾತಿ, ಧರ್ಮ, ಭಾಷೆ, ಪ್ರದೇಶ ಇಲ್ಲವೆ ಲಿಂಗ ತಾರತಮ್ಯವಿಲ್ಲದೆ ಕೇವಲ ಮಾನವರಾಗಿ ಸಮಾನ ಅವಕಾಶದ ಸಮಾಜಕ್ಕಾಗಿ ಹೆಜ್ಜೆ ಹಾಕಬೇಕಿದೆ. ಇದೇ ಕಾರಣದಿಂದ ಧರ್ಮ ಸಾಮರಸ್ಯದ ಮಹಾನ್ ಪ್ರತಿಪಾದಕ ಸ್ವಾಮಿ ವಿವೇಕಾನಂದರ ಜನ್ಮದಿನವೇ ನಡಿಗೆ ಆರಂಭಿಸಲಾಗುತ್ತಿದೆ’ ಎನ್ನುತ್ತಾರೆ ‘ಎಂ’.

ಪಾದಯಾತ್ರೆಯಲ್ಲಿ ಜತೆಗೂಡಲು ಅಖಿಲ ಭಾರತೀಯ ವೈದ್ಯಕೀಯ ಸಂಸ್ಥೆ (ಏಮ್ಸ್), ಭಾರತೀಯ ವಿದ್ಯಾಭವನ, ಸುಲಭ್ ಶೌಚಾಲಯ ಸಂಸ್ಥೆ ಸೇರಿದಂತೆ ಹಲವು ಸಂಘಟನೆಗಳು ಮುಂದೆ ಬಂದಿವೆ. ಮಹಿಳಾ ಸಬಲೀಕರಣ, ಸಮುದಾಯ ಆರೋಗ್ಯ, ಶಿಕ್ಷಣ ಮತ್ತು ಯುವಜನ ಅಭಿವೃದ್ಧಿ ಉದ್ದೇಶಗಳನ್ನೂ ಪಾದಯಾತ್ರೆ ಹೊಂದಿದೆ. ದೇಶದಾದ್ಯಂತ ನೂರಾರು ಹಳ್ಳಿಗಳಲ್ಲಿ ಸುಲಭ್ ಶೌಚಾಲಯ ಸಂಸ್ಥೆ ಈ ನಡಿಗೆಯನ್ನೇ ನೆಪ ಮಾಡಿಕೊಂಡು ಶೌಚಾಲಯ ನಿರ್ಮಾಣಕ್ಕೆ ಮುಂದಾಗಿದೆ.

ಪ್ರತಿದಿನ ತಾವು ತಂಗುವ ಸ್ಥಳಗಳಲ್ಲಿ ‘ಎಂ’ ಅವರು ಧ್ಯಾನವನ್ನೂ ಹೇಳಿಕೊಡುತ್ತಾರೆ. ‘ಜಗತ್ತಿಗೆ ಧ್ಯಾನವನ್ನು ಕಾಣಿಕೆಯಾಗಿ ಕೊಟ್ಟ ದೇಶದಲ್ಲೇ ಅದು ಮಾರಾಟದ ಸರಕಾಗಿರುವುದು ವಿಷಾದದ ಸಂಗತಿ’ ಎಂದು ಅವರು ವಿಷಾದಿಸುತ್ತಾರೆ. ಗುರುಗಳ ಆಜ್ಞೆಯಂತೆ ಧ್ಯಾನ ಕಲಿತವರಿಂದ ಅವರು ಒಂದು ರೂಪಾಯಿ ಹಾಗೂ ಒಂದು ಹೂವನ್ನು ಮಾತ್ರ ಕಾಣಿಕೆಯಾಗಿ ಪಡೆಯುತ್ತಾರೆ.




## ಯಾರಿವರು ‘ಎಂ’?



‘ಎಂ’ ಎಂದೇ ಪರಿಚಿತರಾಗಿರುವ ಮುಮ್ತಾಜ್ ಅಲಿಯವರು ಆಧ್ಯಾತ್ಮಿಕ ಮಾರ್ಗದರ್ಶಕ, ಸಮಾಜ ಸುಧಾರಕ. ಜನಿಸಿದ್ದು ತಿರುವನಂತಪುರದಲ್ಲಿ (ಜನನ: 1948 ನವೆಂಬರ್ 6). ಮುಸ್ಲಿಂ ಕುಟುಂಬದಲ್ಲಿ ಹುಟ್ಟಿದ ಅವರು, 19ನೇ ವಯಸ್ಸಿನಲ್ಲಿ ಹಿಮಾಲಯಕ್ಕೆ ಪಯಣ ಬೆಳೆಸಿದರು. ಅಲ್ಲಿ ಸಾಧು– ಸಂತರನ್ನು ಭೇಟಿ ಮಾಡಿದರು. ಮಹೇಶ್ವರನಾಥ್ ಬಾಬಾಜಿ ಅವರ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ತರಬೇತಿ ಪಡೆದರು.

ಅಂತರ್ಧರ್ಮೀಯ ಸಾಮರಸ್ಯವನ್ನು ಬಲವಾಗಿ ಪ್ರತಿಪಾದಿಸುತ್ತಾ ಬಂದಿರುವ ಅವರು ವಿವಾಹಿತರಾಗಿದ್ದು ಇಬ್ಬರು ಮಕ್ಕಳಿದ್ದಾರೆ. ಅವರ ‘ಹಿಮಾಲಯ ಗುರುವಿನ ಗರಡಿಯಲ್ಲಿ: ಓರ್ವ ಯೋಗಿಯ ಆತ್ಮಕಥೆ’ ಕೃತಿ ಹೆಚ್ಚು ಮಾರಾಟವಾಗುತ್ತಿರುವ ಕೃತಿ. 66 ವರ್ಷದ ‘ಎಂ’ ಅವರು ಆಂಧ್ರಪ್ರದೇಶದ ಮದನಪಲ್ಲಿಯಲ್ಲಿ ವಾಸವಾಗಿದ್ದಾರೆ. ಅವಕಾಶವಂಚಿತ ಬುಡಕಟ್ಟು ಜನಾಂಗದ ಮಕ್ಕಳಿಗಾಗಿ ಸತ್ಸಂಗ ವಿದ್ಯಾಲಯ ಸ್ಥಾಪಿಸಿದ್ದಾರೆ. ಮಾನವ ಏಕತಾ ಮಿಷನ್ ಮೂಲಕ ಸರ್ವಧರ್ಮಗಳ ಏಕಮೂಲ ಸಂದೇಶ ಸಾರುತ್ತಿದ್ದಾರೆ.

ನಡಿಗೆಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗೆ: 98458 31683. ಜಾಲತಾಣ: www.walkofhope.in